# PDS Multinational Fashions Limited

PDS
Global. Collaborative. Ethical

PDS/SE/20220-21/28 **02nd October, 2020**

To,

| **The General Manager,**<br>Corporate Service Department<br>BSE Limited P. J Tower, Dalal Street, Fort,<br>Mumbai-400001 | **The General Manager,**<br>Listing Department<br>National Stock Exchange of India Limited<br>Exchange Plaza, Bandra Kurla Complex,<br>Bandra (East), Mumbai-400051. |
|---|---|

**Scrip Code/ID: BSE: 538730; NSE: PDSMFL**

**Sub: Newspaper Publication of 09th Annual General Meeting (AGM) Notice pursuant to Regulation 47 of SEBI (Listing Obligations and Disclosure Requirements) Regulations, 2015.**

Pursuant to Regulation 47 of SEBI (Listing Obligations and Disclosure Requirements) Regulations, 2015, please find enclosed copy of Notice of 09th AGM published in Business Standard and Hosadigantha (regional language) Newspapers dated 02nd October, 2020.

Kindly take the same on record and oblige

**For PDS Multinational Fashions Limited**

**B. Chandra Sekhara Reddy**
**Company Secretary & Head-Legal**

PDS Multinational Fashions Limited

Encl: as above

PDS

Global, Collaborative, Ethical

**ಪಿಡಿಎಸ್ ಮಲ್ಟಿನ್ಯಾಷನಲ್ ಫ್ಯಾಶನ್ಸ್ ಲಿಮಿಟೆಡ್**

CIN: L18101KA2011PLC094125

ರಿಜಿಸ್ಟರ್ಡ್ ಆಫೀಸ್: #758 & 759, 2ನೇ ಮಹಡಿ, 19ನೇ ಮೇನ್, ಸೆಕ್ಟರ್–2, ಎಚ್‌ಎಸ್‌ಆರ್ ಬಡಾವಣೆ, ಬೆಂಗಳೂರು–560102, ಕರ್ನಾಟಕ

ದೂರವಾಣಿ: +91 80 67653000;

ಇಮೇಲ್: investors@pdsmultinational.com

ವೆಬ್‌ಸೈಟ್: www.pdsmultinational.com

## ಪಿಡಿಎಸ್ ಮಲ್ಟಿನ್ಯಾಷನಲ್ ಫ್ಯಾಷನ್ಸ್ ಲಿಮಿಟೆಡ್‌ನ 09ನೇ ವಾರ್ಷಿಕ ಸರ್ವಸದಸ್ಯರ ಸಭೆಯ (ಎಜಿಎಂ) ಸೂಚನೆ

ಪಿಡಿಎಸ್ ಮಲ್ಟಿನ್ಯಾಷನಲ್ ಫ್ಯಾಷನ್ಸ್ ಲಿಮಿಟೆಡ್‌ನ ('ಕಂಪನಿ') ಒಂಬತ್ತನೆಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಬುಧವಾರ, 2020ರ ಅಕ್ಟೋಬರ್ 28ರಂದು ಬೆಳಿಗ್ಗೆ 11.00 ಗಂಟೆಗೆ (ಭಾ.ಕಾ.) ವಿಡಿಯೊ ಕಾನ್ಫರೆನ್ಸ್ (VC)/ಇತರ ಶ್ರವಣ ದೃಶ್ಯ ಮಾಧ್ಯಮಗಳ (OAVM) ಮೂಲಕ ಕಂಪನಿಗಳ ಅಧಿನಿಯಮ, 2013 ರಲ್ಲಿನ ಅನ್ವಯವಾಗುವ ನಿಬಂಧನೆಗಳ, ಮತ್ತು ಇತರೆ ಅನ್ವಯವಾಗುವ ಕಾನೂನುಗಳ, ಅವುಗಳ ಅಡಿಯಲ್ಲಿ ಮಾಡಿರುವ ನಿಯಮಗಳ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ 2020ರ ಏಪ್ರಿಲ್ 08 ದಿನಾಂಕದ ಸಾಮಾನ್ಯ ಸುತ್ತೋಲೆ ಸಂ. 14/2020; 2020 ಏಪ್ರಿಲ್ 13 ದಿನಾಂಕದ ಸಾಮಾನ್ಯ ಸುತ್ತೋಲೆ ಸಂ. 17/2020; ಮತ್ತು 2020ರ ಮೇ 05 ದಿನಾಂಕದ ಸಾಮಾನ್ಯ ಸುತ್ತೋಲೆ ಸಂ. 20/2020; ಮತ್ತು SEBI ಹೊರಡಿಸಿರುವ 2020ರ ಮೇ 12 ದಿನಾಂಕದ ಸುತ್ತೋಲೆ (ಸಮಗ್ರವಾಗಿ 'ಸುತ್ತೋಲೆ' ಎಂದು ಉಲ್ಲೇಖಿಸಲಾಗುವುದು) ಪ್ರಕಾರ ನಡೆಸಲಾಗುವುದು ಎಂದು ಈ ಸೂಚನೆಯನ್ನು ನೀಡಲಾಗಿದೆ. ಮೇಲೆ ಹೇಳಿರುವ ಸುತ್ತೋಲೆಗಳ ಪ್ರಕಾರ ಕಂಪನಿಗಳು ಒಂದು ಸಾಮಾನ್ಯ ಸ್ಥಳದಲ್ಲಿ, ಸದಸ್ಯರ ಭೌತಿಕ ಹಾಜರಾತಿ ಇಲ್ಲದೆಯೇ VC/OAVM ಮೂಲಕ ಎಜಿಎಂ ನಡೆಸಬಹುದಾಗಿದೆ.

ಮೇಲಿನ ಸುತ್ತೋಲೆಗಳ ಅನುಸಾರ, ತಮ್ಮ ಇಮೇಲ್ ವಿಳಾಸಗಳನ್ನು ಡಿಪಾಸಿಟರಿ ಪಾರ್ಟಿಸಿಪೆಂಟರು/ರಿಜಿಸ್ಟ್ರಾರ್ ಮತ್ತು ಕಂಪನಿಯ ಶೇರು ವರ್ಗಾವಣೆ ಮಧ್ಯವರ್ತಿಗಳೊಂದಿಗೆ (RTA) ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಎಜಿಎಂ ಸೂಚನೆ ಹಾಗೂ 2019–20 ವಿ.ವ.ದ ವಾರ್ಷಿಕ ವರದಿಯನ್ನು ವಿದ್ಯುನ್ಮಾನ ಮಾರ್ಗಗಳಲ್ಲಿ ಕಳುಹಿಸಲಾಗುವುದು.

ಎಜಿಎಂ ಸೂಚನೆ ಮತ್ತು 2019–20 ವಿ.ವ.ದ ವಾರ್ಷಿಕ ವರದಿಗಳು ಕಂಪನಿಯ www.pdsmultinational.com, ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್‌ನ www.bseindia.com, ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾದ www.nseindia.com ಮತ್ತು ಲಿಂಕಿನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ www.linkintime.co.in ವೆಬ್‌ಸೈಟ್‌ಗಳಲ್ಲಿಯೂ ಲಭ್ಯವಿವೆ.

ಭೌತಿಕ ಸ್ವರೂಪದಲ್ಲಿ ಶೇರುಗಳನ್ನು ಹೊಂದಿರುವ ಸದಸ್ಯರು ಕಂಪನಿಯ ರಿಜಿಸ್ಟ್ರಾರ್ ಮತ್ತು ಕಂಪನಿಯ ಶೇರು ವರ್ಗಾವಣೆ ಮಧ್ಯವರ್ತಿಯಾದ (RTA) ಲಿಂಕಿನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಗೆ enotices@linkintime.co.in ಮೂಲಕ, ಹಾಗೂ ಡೀಮ್ಯಾಟ್ ಸ್ವರೂಪದಲ್ಲಿ ಶೇರುಗಳನ್ನು ಹೊಂದಿರುವಂತಹ ಸದಸ್ಯರು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟರ ಮೂಲಕ ತಮ್ಮ ಡಿಪಾಸಿಟರಿಗಳಿಗೆ ಇಮೇಲ್ ಐಡಿಗಳನ್ನು ಕಳುಹಿಸಬೇಕಾಗಿ ವಿನಂತಿಸಿಕೊಳ್ಳುತ್ತಿದ್ದೇವೆ.

VC/OAVM ಮೂಲಕ ಎಜಿಎಂನಲ್ಲಿ ಭಾಗವಹಿಸುವ ಕುರಿತಂತೆ ಸೂಚನೆಗಳನ್ನು ಎಜಿಎಂನ ಸೂಚನೆಯಲ್ಲಿ ನೀಡಲಾಗುವುದು.

ಎಜಿಎಂ ಸೂಚನೆಯಲ್ಲಿ ಹೇಳಿರುವಂತಹ ಎಲ್ಲ ನಿರ್ಣಯಗಳ ಮೇಲೆ ತಮ್ಮ ಮತಗಳನ್ನು ಚಲಾಯಿಸಲು ಅನುವಾಗುವಂತೆ ಕಂಪನಿಯು ಎಲ್ಲ ಸದಸ್ಯರಿಗೂ ಇ–ಮತದಾನ ಸೌಲಭ್ಯವನ್ನು (ರಿಮೋಟ್ ಇ–ವೋಟಿಂಗ್) ಒದಗಿಸುತ್ತಿದೆ. ಮತ್ತೂ, ಎಜಿಎಂ ಸಮಯದಲ್ಲಿಯೂ ಮತ ಚಲಾಯಿಸಲು ಸಾಧ್ಯವಾಗುವಂತೆ ಕಂಪನಿಯು ಇ–ಮತದಾನ (ಇ–ವೋಟಿಂಗ್) ಸೌಲಭ್ಯವನ್ನೂ ಒದಗಿಸಲಿದೆ. ರಿಮೋಟ್ ಇ–ವೋಟಿಂಗ್ ಹಾಗೂ ಇ–ವೋಟಿಂಗ್ ಪ್ರಕ್ರಿಯೆಗಳ ಪೂರ್ಣ ವಿವರಗಳನ್ನು ಎಜಿಎಂ ಸೂಚನೆಯಲ್ಲಿ ಒದಗಿಸಲಾಗುವುದು.

**ಪಿಡಿಎಸ್ ಮಲ್ಟಿನ್ಯಾಷನಲ್ ಫ್ಯಾಷನ್ಸ್ ಲಿಮಿಟೆಡ್‌ಗಾಗಿ**

(ಸಹಿ/–)

**ಬಿ. ಚಂದ್ರಶೇಖರ ರೆಡ್ಡಿ**

ಕಂಪನಿ ಸೆಕ್ರೆಟರಿ & ಹೆಡ್–ಲೀಗಲ್

ಸ್ಥಳ: ಬೆಂಗಳೂರು

ದಿನಾಂಕ: 01.10.2020